ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.

**ಸಿ.ಸಿ.560/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಪ್ರಜ್ವಲ್ | ಪ್ರಾಸಾಃ 03 |
| ತಂದೆಯ/ಗಂಡನ ಹೆಸರು | : | ವಿಷ್ಣು | ಚಾಸಾಃ 07 |
| ವಯಸ್ಸು | : | 24 ವರ್ಷ | |
| ಕೆಲಸ | : | ಛಾಯಾಗ್ರಾಹಕ | ಸಾ ಪ್ರ ಬೋ |
| ವಾಸ | : | ಶಿವಮೊಗ್ಗ | ದಿಃ18.12.2025 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನನಗೆ ಚಾಸಾ-1 ಮತ್ತು 8 ರವರು ಗೊತ್ತು. ಸಾಕ್ಷಿ ನಿಪಿ-2 ರ ಮಹಜರಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿಃ 03.08.2021 ರಂದು ಮಹಜರಿನ ಸ್ಥಳದಲ್ಲಿ ಮಾಡಿರುತ್ತೇನೆ. ಮಹಜರನ್ನು ಜರುಗಿಸಲು ಚಾಸಾ-1 ರವರು ಸ್ಥಳ ತೋರಿಸಿರುತ್ತಾರೆ. ಸದರಿ ಸಮಯದಲ್ಲಿ ನನ್ನೊಂದಿಗೆ ಚಾಸಾ-8 ರವರು ಸಹಿ ಮಾಡಿರುತ್ತಾರೆ. ಮಹಜರನ್ನು ಬೆಳಗ್ಗೆ 9.00 ರಿಂದ 10.00 ಗಂಟೆವರೆಗೆ ಜರುಗಿಸಿರುತ್ತಾರೆ. ಪೊಲೀಸರು ನನಗೆ ಮಹಜರನ್ನು ಓದಿ ಹೇಳಿರುತ್ತಾರೆ. ಸಾಕ್ಷಿ ನಿಪಿ-3 ಮತ್ತು 4 ರ ಛಾಯಾಚಿತ್ರಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ನಿಪಿ-8 ಎಂದು, ಸದರಿ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಿಪಿ-2 ಕ್ಕೆ ಸಹಿ ಮಾಡಿದ ದಿನದಂದೇ ಮಾಡಿರುತ್ತೇನೆ. ಸದರಿ ದಾಖಲಾತಿಗೆ ಬೆಳಗ್ಗೆ 10.30 ರಿಂದ 11.30 ರವರೆಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲಾತಿಗೆ ನನ್ನೊಂದಿಗೆ ಚಾಸಾ-8 ರವರು ಸಹಿ ಮಾಡಿರುತ್ತಾರೆ. ಸಾಕ್ಷಿ ವಾಹನ ಅಮಾನತ್ತು ಪಂಚನಾಮೆಯ ಕಾಲಕ್ಕೆ ತೆಗೆದ ಛಾಯಾಚಿತ್ರಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ್ದು, ನಿಪಿ-9 ರಿಂದ 12 ಎಂದು ಗುರುತಿಸಲಾಯಿತು. ಸದರಿ ಛಾಯಾಚಿತ್ರಗಳಿಗೆ ಸಂಬಂಧಿಸಿದ ಸಿ.ಡಿ ಯನ್ನು ನಿಪಿ-13 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿತರ ಪರ ವಕೀಲರಿಂದ :**

ಚಾಸಾ-1 ರವರು ನನಗೆ ಸಂಬಂಧಿಕರಲ್ಲ. ಮಹಜರಿನಲ್ಲಿ ಏನು ಬರೆದಿದೆ ಎಂದು ನನಗೆ ಸಂಪೂರ್ಣವಾಗಿ ಗೊತ್ತಿಲ್ಲ. ಮಹಜರಿನ ಸ್ಥಳದ ಕುರಿತು ಮಾಹಿತಿ ಇದ್ದು, ಚೆಕ್ಕುಬಂದಿ

ಕುರಿತು ಮಾಹಿತಿ ಇಲ್ಲ. ವಾಹನಗಳನ್ನು ತೆಗೆದುಕೊಂಡ ಬಗ್ಗೆ ಮಹಜರನ್ನು ಮಾಡಿರುತ್ತಾರೆ. ಮಹಜರನ್ನು ಜರುಗಿಸಿದ ಕಾಲಕ್ಕೆ ನಾನು ಉಪಸ್ಥಿತನಿದ್ದು, ಸಹಿ ಮಾಡಿರುತ್ತೇನೆ. ನಾನು ಮಹಜರಿನ ಕಾಲಕ್ಕೆ ಉಪಸ್ಥಿತನಿದ್ದ ಕಾರಣ ಸಹಿ ಮಾಡಿರುತ್ತೇನೆ.

**ಮರುವಿಚಾರಣೆ : ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ